**ಎಂ.ವಿ.ಸಿ. 1223/2022, ಪಿ.ಡಬ್ಲೂ-12 ಹೆಸರುಃ ಎಂ.ಜಿ.ಶೇಟ್**

**ದಿಃ11-02-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಎಸ್.ಆರ್. ವಕೀಲರಿಂದಃ**

ನಾನು ಈ ನ್ಯಾಯಾಲಯದಲ್ಲಿ ಅಪಘಾತದ ಕುರಿತು ಪರಿಹಾರವನ್ನು ಕೋರಿ ಪೊಲೀಸ್ ದಾಖಲಾತಿಗಳ ಆಧಾರದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಪಿ.8 ರಂತೆ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣಾಧಿಕಾರಿಗಳು ಈ ಪ್ರಕರಣದ 1 ನೇ ಎದುರುದಾರರ ಚಾಲಕನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು ಎಂದರೆ ಸರಿ. 1 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್ ಸಂಖ್ಯೆ ಕೆ.ಎ.-17-ಟಿ-2681 ಎಂದರೆ ಸರಿ. ನಾವು ಅಪಘಾತದ ಸಮಯದಲ್ಲಿ ಚಿಕ್ಕಜಾಜೂರಿನಿಂದ ನಾಯಕನಹಟ್ಟಿ ದೇವಸ್ಥಾನಕ್ಕೆ ಟಿ.ಟಿ. ವಾಹನದಲ್ಲಿ ಹೋಗುತ್ತಿದ್ದೆವು. ಟಿ.ಟಿ. ವಾಹನದ ಸಂಖ್ಯೆ ಕೆ.ಎ.-04-ಡಿ-8153 ಆಗಿರುತ್ತದೆ. ಸದರಿ ಟಿ.ಟಿ. ವಾಹನವನ್ನು ಧನುಷ್ ಎಂಬುವವರು ಚಾಲನೆ ಮಾಡುತ್ತಿದ್ದರು. ಟಿ.ಟಿ. ವಾಹನದ ಚಾಲಕ ಸದರಿ ವಾಹನವನ್ನು ಅತೀ ವೇಗವಾಗಿ ಚಾಲನೆ ಮಾಡುತ್ತಿದ್ದನು. ಟಿ.ಟಿ. ವಾಹನದ ಚಾಲಕನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ, ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದ್ದ ಟ್ರಾಕ್ಟರ್‌ಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ. ಸದರಿ ಪರಿಣಾಮ ನನಗೆ ಅಪಘಾತದಲ್ಲಿ ಸಣ್ಣ ಗಾಯಗಳು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಅಪಘಾತದ ಕುರಿತು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿಲ್ಲ.

2. ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದ್ದ ಟ್ರಾಕ್ಟರ್‌ನ ಒಂದು ಟೈರು ಪಂಚರ್ ಆಗಿದ್ದ ಕಾರಣ ಒಂದು ಚಕ್ರ ಇರಲಿಲ್ಲ ಎಂದರೆ ಸರಿ. ಟ್ರಾಕ್ಟರ್‌ನ ಚಾಲಕ ಟೈರಿಗೆ ಪಂಚರ್‌ನ್ನು ಹಾಕಿಸಿಕೊಂಡು ಬರಲು ಹೋಗಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ಟ್ರಾಕ್ಟರ್‌ನ ಇಂಜಿನ್ ಇರಲಿಲ್ಲ ಎಂದರೆ ಸಾಕ್ಷಿ ಇರಲಿಲ್ಲ ಎಂದು ಹೇಳುತ್ತಾರೆ. ಅಪಘಾತ ಏರ್ಪಟ್ಟಂತಹ ಸ್ಥಳ ಚಿತ್ರದುರ್ಗ - ಶಿವಮೊಗ್ಗ ಎನ್.ಹೆಚ್.13 ರ ರಸ್ತೆ ಎಂದರೆ ಸರಿ. ಸದರಿ ರಸ್ತೆ ಸುಮಾರು 30 ಅಡಿ ಅಗಲ ಇದೆ ಎಂದರೆ ಸರಿ. ಟ್ರೈಲರ್ ರಸ್ತೆಯ 6 ಅಡಿಗಳ ಅಂಚಿನಲ್ಲಿ ಎಡಭಾಗದಲ್ಲಿ ನಿಂತಿತ್ತು ಎಂದರೆ ಸರಿ. ಅಪಘಾತಕ್ಕೆ ಟಿ.ಟಿ. ವಾಹನದ ಚಾಲಕನ ಅತೀ ವೇಗವೇ ಕಾರಣ ಎಂದರೆ ಸರಿ. ಈ ಕುರಿತು ತನಿಖಾಧಿಕಾರಿಗಳು ಸ್ಥಳ ಮಹಜರಿನಲ್ಲಿ ಉಲ್ಲೇಖ ಮಾಡಿರುತ್ತಾರೆ ಎಂದರೆ ಸರಿ. ತನಿಖಾಧಿಕಾರಿಗಳು ನಿಪಿ.7 ರಂತೆ ಸಲ್ಲಿಸಿದ್ದ ದೋಷಾರೋಪಣ ಪಟ್ಟಿಯ ಕುರಿತು 1 ನೇ ಎದುರುದಾರರ ಚಾಲಕನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಪುರಸ್ಕರಿಸಿ 1 ನೇ

ಎದುರುದಾರರಿಗೆ ಸಂಬಂಧಿಸಿದಂತೆ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು 2 ನೇ ಎದುರುದಾರರಿಗೆ ಸೇರಿದ ಟಿ.ಟಿ. ವಾಹನದ ಚಾಲಕನ ತಪ್ಪಿನಿಂದ ಏರ್ಪಟ್ಟಿದ್ದು, ಹಾಗಾಗಿ 3 ನೇ ಎದುರುದಾರರು ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು : 3 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ</u>**

3. ನಾವು ಹೋಗುತ್ತಿದ್ದ ಟೆಂಪೋ ಟ್ರಾವಲರ್‌ನಲ್ಲಿ 12 ರಿಂದ 13 ಜನ ಇದ್ದೆವು. ಅಪಘಾತದ ನಂತರ ನಮ್ಮನ್ನು ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡರು. ಅಪಘಾತದ ಕುರಿತು ದೂರನ್ನು ಯಾರು ನೀಡಿದರು ಎಂದು ನನಗೆ ಗೊತ್ತಿಲ್ಲ. ನಾನು ನೀಡಿದ ಹೇಳಿಕೆಯ ಆಧಾರದಲ್ಲಿ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಟ್ರಾಕ್ಟರ್‌ನ ಚಾಲಕ ಟ್ರಾಕ್ಟರ್‌ನ್ನು ರಸ್ತೆಯಲ್ಲಿ ನಿಲ್ಲಿಸಿದ್ದರಿಂದ ಅಪಘಾತ ಆಗಿದೆ ಎಂದು ಹೇಳೀಕೆಯನ್ನು ನೀಡಿರುತ್ತೇನೆ ಎಂದರೆ ಸಾಕ್ಷಿ ಟೆಂಪೋ ಟ್ರಾವಲರ್ ಚಾಲಕ ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ಬದಿ ನಿಲ್ಲಿಸಿದ್ದ ಟ್ರಾಕ್ಟರ್‌ಗೆ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿದೆ ಎಂದು ಹೇಳಿದ್ದೇನೆ ಎಂದು ಹೇಳುತ್ತಾರೆ. ನಾನು ಸಲ್ಲಿಸಿರುವ ಅರ್ಜಿಯಲ್ಲಿನ ಅಂಶಗಳನ್ನು ಓದಿ ತಿಳಿದುಕೊಂಡಿದ್ದು, ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನಾನು 12 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನನ್ನ ಅರ್ಜಿಯಲ್ಲಿ ನಮ್ಮ ಟೆಂಪೋ ಟ್ರಾವಲರ್ ಚಾಲಕನು ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದ ಟ್ರಾಕ್ಟರ್‌ಗೆ ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಡಿಕ್ಕಿಪಡಿಸಿದನು ಎಂದು ಹೇಳಿದ್ದೇನೆ.

4. ನಾನು ಸಲ್ಲಿಸಿರುವ ಅರ್ಜಿಯಲ್ಲಿ 'Tractor Reg. No.KA-17/T-2681 parked in the road which was parked irregularly by the driver of the Tractor without following traffic rules and negligently and caused the accident' ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಟ್ರಾಕ್ಟರ್ ಮತ್ತು ಟೆಂಪೋ ಟ್ರಾವಲರ್ ಇಬ್ಬರೂ ಪರಿಹಾರ ನೀಡಬೇಕು ಎಂದು ಅರ್ಜಿಯಲ್ಲಿ ಕೇಳಿದ್ದೇನೆ ಎಂದರೆ ಸರಿ. ಟ್ರಾಕ್ಟರ್ ಮತ್ತು ಟ್ರೈಲರ್‌ಗೆ ವಿಮೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಟೆಂಪೋ ಟ್ರಾವಲರ್‌ಗೆ ವಿಮೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಟೆಂಪೋ ಟ್ರಾವಲರ್ ಚಾಲಕ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಟ್ರಾಕ್ಟರ್‌ಗೆ ಡಿಕ್ಕಿಪಡಿಸಿದ್ದಾನೆ ಎಂದು ಹೇಳಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ. ನಾನು ಟೆಂಪೋ ಟ್ರಾವಲರ್‌ನಲ್ಲಿ ಮಧ್ಯ ಭಾಗದ ಸೀಟಿನಲ್ಲಿ ಕುಳಿತಿದ್ದೆನು. ಟ್ರಾಕ್ಟರ್‌ನ ಚಾಲಕನ ತಪ್ಪಿನಿಂದ ಅಪಘಾತ ಆಗಿದ್ದು, ಟೆಂಪೋ ಟ್ರಾವಲರ್ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್

ಮತ್ತು ಟ್ರೈಲರ್‌ಗೆ ವಿಮೆ ಇಲ್ಲದ ಕಾರಣ ಹಾಗೂ ಟೆಂಪೋ ಟ್ರಾವಲರ್‌ಗೆ ವಿಮೆ ಇರುವ ಕಾರಣ ವಿಮಾ ಕಂಪನಿಯಿಂದ ಪರಿಹಾರವನ್ನು ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಕತ್ತಲಾಗಿದ್ದು, ಮುಂಬಾಗದಲ್ಲಿ ಏನು ಆಗುತ್ತಿತ್ತು ಎಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ.

5. ಅಪಘಾತದಲ್ಲಿ ನನಗೆ ಸಣ್ಣ ಪುಟ್ಟ ಗಾಯಗಳಾಗಿತ್ತು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ